

# ದಟ್ಟ ಕಾಡಿನ ಬೆರಗು; ಕಾಳಿನದಿಯ ಸೆರಗು

ದಟ್ಟ ಕಾಡಿನ ನಡುವೆ ಕಳೆದು ಹೋಗಬೇಕು ಎನ್ನುವವರಿಗೆ ದಾಂಡೇಲಿ–ಜೋಡಿಯಾ ಹೇಳಿ ಮಾಡಿಸಿದ ಜಾಗ. ಕಾಳಿ ನದಿಯ ಸುಳಿ, ಹೆಗಲಿಗೆ ಹೆಗಲು ಕೊಟ್ಟು ಬಿಸಿಲಕೋಲೂ ನೆಲಕ್ಕೆ ತಾಗದಷ್ಟು ದಟ್ಟಗೆ ನಿಂತ ಮರಗಳ ಸಾಲು... ದಿನವಿಡೀ ಸುತ್ತಿ ದಣಿದವರನ್ನು ಕೈ ಬೀಸಿ ಕರೆಯುವ ಕಾಡ ನಡುವೆ ಸುಮ್ಮನೆ ನಿಂತ ಹೋಂ ಸ್ಟೇಗಳು... ಜಗವ ಮರೆಯಲು ಇನ್ನೇನು ಬೇಕು?

**■ ನಾಗರಾಜ ವೈದ್ಯ**
ಚಿತ್ರಗಳು: ಎನ್ವಿ

ಎಲ್ಲೆಡೆ ರಣಬಿಸಿಲು. ಮನಸ್ಸು–ದೇಹ ಎರಡೂ ತಂಪನ್ನು ಬಯಸುತ್ತಿದ್ದರೆ ಉತ್ತರ ಕನ್ನಡ ಜಿಲ್ಲೆಯ ಜೋಯಿಡಾದ ದಟ್ಟ ಕಾಡಲ್ಲಿ ಶೃಂಗಾರದ ಹೊಂಗೆ ಮರ ಹೂ ಬಿಟ್ಟು ಕೈ ಬೀಸಿ ಕರೆಯುತ್ತದೆ. ಕಾಳಿಯ ಒಡಲಲ್ಲಿ ರ್‍ಯಾಫ್ಟಿಂಗ್, ಎಲ್ಲ ತಲೆಬಿಸಿಗಳನ್ನು ಮರೆತು ಟಿಂಬರ್ ಡಿಪೋದ ಹಕ್ಕಿಗಳ ಕಿಚಪಿಚ, ಕ್ಯಾಸಲ್ ರಾಕ್‌ನ ದಿವ್ಯ ನೀರವತೆ, ಕಾಳಿ ಹಿನ್ನೀರಿನ ದೋಣಿ ವಿಹಾರ... ಹೀಗೆ ಕಂಪ್ಲೀಟ್ ಪ್ಯಾಕೇಜ್ ಪ್ರವಾಸಿಗರನ್ನು ಸಂತುಷ್ಟಗೊಳಿಸುತ್ತದೆ. ಇಕೋ ಟೂರಿಸಂನ ಹೊಸ ಹೆಗ್ಗುರುತಾದ ಜೋಯಿಡಾದ ಕಾಡಲ್ಲೊಂದು ಸುತ್ತು ಹಾಕಿ ಬರೋಣ.

## ಕಾಡುವ ಕಾಡು!

ಜೋಯಿಡಾ, ದಾಂಡೇಲಿ ಅಂದಾಕ್ಷಣ ತಟ್ಟನೆ ನೆನಪಾಗೋದು ದಟ್ಟ ಕಾಡು. ಇಲ್ಲಿಗೆ ಬರುವವರಿಗೆ ಮುಖ್ಯವಾಗಿ ನೀರು–ನೆರಳು–ನೆಮ್ಮದಿ ಮೂರೂ ಲಭ್ಯ. ಐವತ್ತು ಕಿಲೋಮೀಟರ್ ಸುತ್ತಳತೆಯಲ್ಲಿ ಬಯಸಿ ಬಂದದ್ದೆಲ್ಲವೂ ಸಿಕ್ಕರೆ ಯಾರಿಗೆ ತಾನೇ ಸಂತೋಷವಾಗುವುದಿಲ್ಲ ಹೇಳಿ! ಅದಕ್ಕೇ ಮತ್ತೆ ಮತ್ತೆ ಮನಸು ಜೋಯಿಡಾವನ್ನು ಕನವರಿಸುವುದು. ಪ್ರಕೃತಿಯ ಸೊಬಗಿನ ಜತೆಗೆ ಜೀವವೈವಿಧ್ಯ ಕಣ್ತುಂಬಿಸಿಕೊಳ್ಳಬಹುದು. ರೋಮಾಂಚನಗೊಳಿಸುವ ಆಟಗಳನ್ನಾಡಬಹುದು. ಸೈಟ್ ಸೀಯಿಂಗ್, ವೈಲ್ಡ್ ಲೈಫ್ ಸಫಾರಿ, ಬೋಟಿಂಗ್, ರ್‍ಯಾಫ್ಟಿಂಗ್, ಕಯಾಕಿಂಗ್, ಜಾಕೋಜಿ ಸೇರಿದಂತೆ ಇತರ ವಾಟರ್ ಗೇಮ್‌ಗಳು, ಟ್ರೆಕಿಂಗ್, ಕೆನೋಯಿಂಗ್, ಮೌಂಟೇನ್ ಬೈಕಿಂಗ್, ಬರ್ಡ್ ವಾಚಿಂಗ್ ಇಲ್ಲಿನ ಹೈಲೈಟ್ಸ್. ಬರುವ ಪ್ರವಾಸಿಗರಿಗೆ ಉಪಚಾರ ಮಾಡಲಿಕ್ಕೆಂದೇ ಹಲವು ಹೋಂ ಸ್ಟೇಗಳು, ರೆಸಾರ್ಟ್‌ಗಳು ಇಲ್ಲಿವೆ. ಕಾನ್ಸೆಪ್ಟ್ ಬೇಸ್ಡ್ ಹೋಂ ಸ್ಟೇಗಳ ಅನುಭವವೇ ವಿಭಿನ್ನ.

## ಏನೇನಿವೆ?

ಉಳವಿಯ ಆಕಳಗವಿ, ಬಾಪೇಲಿಯ ವ್ಯೂ ಪಾಯಿಂಟ್, ಪಣಸೋಲಿಯ ವೈಲ್ಡ್ ಲೈಫ್ ಸಫಾರಿ, ಕುಳಗಿಯ ನೇಚರ್ ಕ್ಯಾಂಪ್, ನಿಂತಲ್ಲೇ ಮೂರು ತಾಲ್ಲೂಕುಗಳ ಭೂಪ್ರದೇಶವನ್ನು ತೋರಿಸುವ ಎಸ್. ಆರ್. ಭಾಗ್ವತ್ ಪಾಯಿಂಟ್, ಹಾರ್ನ್‌ಬಿಲ್ ಭವನ,